2018 ಕ.ತೀ.ವ. 1045

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಶ್ರೀಮತಿ ಸವಿತ ಸುರೇಶ್ ನಾಯಕ್ ಮತ್ತು ಇತರರು
-ವಿರುದ್ಧ- ಶ್ರೀ ಗಣಪತಿ ಮತ್ತು ಇತರರು*

ಮೋಟಾರು ವಾಹನಗಳ ಅಧಿನಿಯಮ, 173(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.

ದಿನಾಂಕ 25.06.2008ರಂದು ಸಂಭವಿಸಿದ ಅಪಘಾತದಲ್ಲಿ ಸುರೇಶ ಹನುಮಂತ ನಾಯಕ್ ಸಾವನ್ನಪ್ಪಿರುವನು ಅವನ ಕಾನೂನುಸಮ್ಮತ ವಾರಸುದಾರರು ಮತ್ತು ಅವಲಂಬಿತರು ದಿನಾಂಕ 24.09.2010ರಂದು ಹೆಚ್ಚುವರಿ ಮೋಟಾರು ವಾಹನ ಅಪಘಾತಗಳ ಕ್ಲೇಮು ನ್ಯಾಯಾಧಿಕರಣ ಇವರು ಎಂ.ವಿ.ಸಿ.ಸಂಖ್ಯೆ. 85/2008ರಲ್ಲಿ ಹೊರಡಿಸಿದ ಐತೀರ್ಪನ್ನು ನಷ್ಟಪರಿಹಾರವನ್ನು ಮತ್ತಷ್ಟು ಹೆಚ್ಚಿಸಬೇಕೆಂದು ಕೋರಿ ಎಂ.ಎಫ್.ಎ.ಸಂಖ್ಯೆ: 21386/2011ರಲ್ಲಿ ಅಪೀಲು ಅರ್ಜಿಯನ್ನು ಸಲ್ಲಿಸಿರುವರು. ಇದರಿಂದ ಸಂ.ಕೆಎ 31-4789ರಲ್ಲಿ ನೋಂದಾಯಿತವಾಗಿರುವ ಟೆಂಪೋ ಟ್ರಾಕ್ಸ್‌ನ ವಿಮಾಕರ್ತ ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ ಅವರು ಅಪೀಲನ್ನು ಎಂ.ಎಫ್.ಎ ಸಂಖ್ಯೆ 21592/2011ರಲ್ಲಿ ದಾಖಲಿಸಿರುವರು.

ಮೊಕದ್ದಮೆಯ ಮತ್ತೊಂದು ಕಡೆಯಲ್ಲಿ, ಅಪಾದನೆಗೆ ಗುರಿಯಾದ ವಾಹನದಿಂದ ಸಂಭವಿಸಿದ ಅಪಘಾತವು, ಆ ವಾಹನದ ಚಾಲಕನ

* ಎಂಎಫ್ಎ ಸಂಖ್ಯೆ: 21386/2011 ಮತ್ತು ಇತರೆ, ದಿನಾಂಕ: 15ನೇ ಜೂನ್, 2017.

ಅತಿವೇಗ, ನಿರ್ಲಕ್ಷತೆಯಿಂದ ವಾಹನ ಚಲಾಯಿಸಿದ ಕಾರಣದಿಂದ ನಡೆದ ಅಪಘಾತವಾಗಿದ್ದು, ಸುರೇಶ ಹನುಮಂತ ನಾಯಕನು ಸಾವನ್ನಪ್ಪಿರುವುದು ಅಪಘಾತದ ಸಮಯದಲ್ಲಿ ಆ ವಾಹನವು ವಿಮೆಗೆ ಒಳಪಟ್ಟಿರುವುದು ಈ ವಿಷಯ ಸಂಬಂಧದಲ್ಲಿ ಯಾವುದೇ ವಿವಾದವು ಇರುವುದಿಲ್ಲ. ಇಲ್ಲಿ ಪರಿಗಣಿಸಬೇಕಾದ ಅಂಶಗಳು ಯಾವುವೆಂದರೆ, ನ್ಯಾಯಾಧಿಕರಣವು ಮೃತನ ಮಾಸಿಕ ಆದಾಯವು ರೂ. 9,000/– ಎಂದು ನಿರ್ಧರಿಸಿರುವುದು ನ್ಯಾಯಯುತವಾದುದೇ ಮತ್ತು ಸಮರ್ಪಕವಾದುದೇ ಎಂಬುದು ಮತ್ತು ಇತರ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ನೀಡಲಾದ ನಷ್ಟ ಪರಿಹಾರವು ಸಮರ್ಥನೀಯವಾಗಿದೆಯೇ ಎಂಬುದನ್ನು ನಿರ್ಧರಿಸಬೇಕಾದ ಅಂಶವಾಗಿದೆ.

ಈ ಅಪೀಲಿನಲ್ಲಿ, ಮೃತನ ಪತ್ನಿಗೆ ಆಗಿರುವ ಸಾಂಗತ್ಯ ನಷ್ಟದ ಸಂಬಂಧದಲ್ಲಿ ಪತ್ನಿಗೆ ಸಹಚರ್ಯೆ, ರಕ್ಷಣೆ, ಸಹಾಯ, ಸೌಕರ್ಯ, ಮಾರ್ಗದರ್ಶನ, ಸಾಂಘಿಕತೆ, ಸಾಂತ್ವನ, ವಾತ್ಸಲ್ಯ ಮತ್ತು ಲೈಂಗಿಕತೆಯ ಹಕ್ಕನ್ನು ಒಳಗೊಂಡಿರುವ ಸಾಂಗತ್ಯದ ನಷ್ಟವನ್ನು ವಿವರಿಸಲಾಗಿದೆ. ಈ ಅಪೀಲಿನಲ್ಲಿ ಮೊದಲು ಕ್ಲೇಮುದಾರರು ಮೃತನ ಪತ್ನಿಯಾಗಿರುವರು ಮತ್ತು ಎರಡು ಮತ್ತು ಮೂರನೇ ಕ್ಲೇಮುದಾರರು ಮೃತನ ಅಪ್ರಾಪ್ತ ವಯಸ್ಸಿನ ಮಕ್ಕಳಾಗಿರುವರು. ಅಪೀಲಿನಲ್ಲಿ ವಿವಿಧ ಕಾರಣಗಳನ್ನು ನೀಡುವ ಮೂಲಕ ನಷ್ಟ ಪರಿಹಾರವನ್ನು ಹೆಚ್ಚಿಸುವುದಕ್ಕೆ ಪ್ರಾರ್ಥಿಸಿರುವರು.

ಆದುದರಿಂದ, ಸಾಂಗತ್ಯ ನಷ್ಟವಾಗಿ ನ್ಯಾಯಾಧಿಕರಣವು ತೀರ್ಮಾನಿಸಿದ ರೂ. 10,000/–ಕ್ಕೆ ವಿರುದ್ಧವಾಗಿ ರೂ. 1,00,000/– ಗಳನ್ನು ನಿಗದಿಪಡಿಸುವುದು ನ್ಯಾಯಯುತವಾದುದಾಗಿದೆ ಮತ್ತು ಯುಕ್ತವಾದುದಾಗಿದೆ. ಅಂದರೆ ಸಾಂಗತ್ಯ ನಷ್ಟದ ಪರಿಹಾರವಾಗಿ

**ರೂ.90,000/– ಗಳನ್ನು ಹೆಚ್ಚಿಸಲಾಗಿದೆ. ಮುಂದುವರೆದು, ಪ್ರೀತಿ ಮತ್ತು ವಾತ್ಸಲ್ಯ ನಷ್ಟಕ್ಕೆ ತೀರ್ಮಾನಿಸಿದ 5,000/– ರೂ.ಗಳ ವಿರುದ್ಧ 1,00,000/– ರೂ.ಗಳಷ್ಟು ಹೆಚ್ಚಿಸಲು ತೀರ್ಮಾನಿಸಿರುವುದು ಸಮರ್ಪಕವಾಗಿದೆ ಎಂದು ಭಾವಿಸಲಾಗಿದೆ. ಅದರ ಪರಿಣಾಮ ಪ್ರೀತಿ ಮತ್ತು ವಾತ್ಸಲ್ಯ ನಷ್ಟಕ್ಕೆ 95,000/– ರೂ.ಗಳಷ್ಟು ಮೊಬಲಗನ್ನು ಹೆಚ್ಚಿಸಲಾಗಿದೆ. ನ್ಯಾಯಾಧಿಕರಣ 'ಮೃತದೇಹವನ್ನು ಸಾಗಿಸುವ' ವೆಚ್ಚವಾಗಿ 2,000/– ರೂ.ಗಳನ್ನು ನೀಡಲು ತೀರ್ಮಾನಿಸಿದೆ. ಅಂತೆಯೇ 2,000 ರೂ.ನ ಜೊತೆಯಲ್ಲಿ 3,000/–ರೂ.ಗಳನ್ನು ಹೆಚ್ಚಿಸಲಾಗಿದೆ. ಅಂದರೆ ಸದರಿ ಶೀರ್ಷಿಕೆಯ ಅಡಿಯಲ್ಲಿ ಸಾಗಣೆ ವೆಚ್ಚವಾಗಿ 5,000/– ರೂ.ಗಳನ್ನು ನಿರ್ಣಯಿಸಲಾಗಿದೆ. ಮುಂದುವರೆದು ಅಂತ್ಯಸಂಸ್ಕಾರ ಮತ್ತು ವಿಧಿ ವಿಧಾನಗಳ ವೆಚ್ಚವಾಗಿ ನೀಡಲಾದ 5,000/– ರೂ.ಗಳಿಗೆ ವಿರುದ್ಧವಾಗಿ 15,000/– ರೂ.ಗಳನ್ನು ಹೆಚ್ಚಿಸಲಾಗಿದೆ. ಸದರಿ ಶೀರ್ಷಿಕೆಯ ಅಡಿಯಲ್ಲಿ ಒಟ್ಟು ಮೊತ್ತವು 20,000/–ರೂ.ಗಳಾಗಿವೆ. ಅಂದರೆ ಎಂಎಫ್ಎ 21386/2011ರಲ್ಲಿನ ಕ್ಲೇಮುದಾರರು/ ಅಪೀಲುದಾರರು ನ್ಯಾಯಾಧಿಕರಣವು ತೀರ್ಮಾನಿಸಿದ 9,82,000/– ರೂ.ಗಳಿಗೆ ಪ್ರತಿಯಾಗಿ ಒಟ್ಟು 14,85,000/– ರೂ.ಗಳಷ್ಟು (ಹದಿನಾಲ್ಕು ಲಕ್ಷ ಎಂಬತ್ತೈದು ಸಾವಿರ ಮಾತ್ರ) ನಷ್ಟ ಪರಿಹಾರವನ್ನು ಪಡೆಯಲು ಕ್ಲೇಮುದಾರರು ಹಕ್ಕುಳ್ಳವರಾಗಿರುವರು.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. 2013 ಎಸಿಜೆ 1403*
*ರಾಜೇಶ್ ಮತ್ತು ಇತರರು –ವಿರುದ್ಧ–*
*ರಾಜಬೀರ್ ಸಿಂಗ್ ಮತ್ತು ಇತರರು (ಉಲ್ಲೇ) 8*

*2. 2012 ಎಸಿಜೆ 1428 (ಎಸ್‌ಸಿ)*
*ಸಂತೋಷ್ ದೇವಿ –ವಿರುದ್ಧ–*
*ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ (ಉಲ್ಲೇ) 13*

*3. 2009 ಎಸಿಜೆ 1298 (ಎಸ್‌ಸಿ)*
*ಸರಳ ವರ್ಮ –ವಿರುದ್ಧ– ದೆಹಲಿ ಸಾರಿಗೆ ನಿಗಮ (ಉಲ್ಲೇ) 13*
*4. 2003 ಎಸಿಜೆ 680 (ಎಸ್‌ಸಿ)*
*ಆರತಿ ಭೇಜ್ ಬುರಹ –ವಿರುದ್ಧ–*
*ಪ್ರದಾನ ಉಪ ನಿರ್ದೇಶಕರು (ಉಲ್ಲೇ) 13*
*5. 1994 ಎಸಿಜೆ 1(ಎಸ್‌ಸಿ)*
*ಪ್ರಧಾನ ವ್ಯವಸ್ಥಾಪಕರು, ಕೇರಳ ರಾಜ್ಯ ರಸ್ತೆ*
*ಸಾರಿಗೆ ನಿಗಮ –ವಿರುದ್ಧ– ಸುಷ್ಮಾ ಥಾಮಸ್ (ಉಲ್ಲೇ) 13*

ಅರ್ಜಿದಾರರ ಪರ : ಶ್ರೀ ಟಿ.ಎಂ. ನದಾಫ್, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ವಿಜಯ್ ಎಂ. ಮಲ್ಲಳ್ಳಿ, ಬಿ.ಸಿ. ಸೀತಾರಾಂ, ವಕೀಲರು.
ಮತ್ತು ಶ್ರೀ ಎನ್.ಆರ್. ಕುಪ್ಪಲೂರು, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಕೆ. ಸೋಮಶೇಖರ್:**

ಪಕ್ಷಕಾರರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಲಾಗಿದೆ ಮತ್ತು ದಾಖಲೆಗಳನ್ನು ಅವಲೋಕಿಸಲಾಗಿದೆ.

2. ದಿನಾಂಕ 25.06.2008ರಂದು ಸಂಭವಿಸಿದ ಅಪಘಾತದಲ್ಲಿ ಸುರೇಶ ಹನುಮಂತ ನಾಯಕ್ ಸಾವನ್ನಪ್ಪಿರುವನು ಅವನ ಕಾನೂನುಸಮ್ಮತ ವಾರಸುದಾರರು ಮತ್ತು ಅವಲಂಬಿತರು ದಿನಾಂಕ 24.09.2010ರಂದು ಹೆಚ್ಚುವರಿ ಮೋಟಾರು ವಾಹನ ಅಪಘಾತಗಳ ಕ್ಲೇಮು ನ್ಯಾಯಾಧಿಕರಣ ಇವರು ಎಂ.ವಿ.ಸಿ.ಸಂಖ್ಯೆ. 85/2008ರಲ್ಲಿ ಹೊರಡಿಸಿದ ಐತೀರ್ಪನ್ನು ನಷ್ಟಪರಿಹಾರವನ್ನು ಮತ್ತಷ್ಟು ಹೆಚ್ಚಿಸಬೇಕೆಂದು ಕೋರಿ ಎಂ.ಎಫ್.ಎ.ಸಂಖ್ಯೆ: 21386/2011ರಲ್ಲಿ ಅಪೀಲು ಅರ್ಜಿಯನ್ನು ಸಲ್ಲಿಸಿರುವರು. ಇದರಿಂದ ಸಂ.ಕೆಎ 31–4789ರಲ್ಲಿ ನೋಂದಾಯಿತವಾಗಿರುವ ಟೆಂಪೋ ಟ್ರ್ಯಾಕ್ಸ್‌ನ

ವಿಮಾಕರ್ತ ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ ಅವರು ಅಪೀಲನ್ನು ಎಂ.ಎಫ್.ಎ ಸಂಖ್ಯೆ 21592/2011ರಲ್ಲಿ ದಾಖಲಿಸಿರುವರು.

3. ಈ ಎರಡೂ ಅಪೀಲುಗಳಲ್ಲಿ ಒಂದು ಕ್ಲೇಮುದಾರರು ಪರಿಹಾರದ ಮೊತ್ತವನ್ನು ಹೆಚ್ಚಿಸಲು ಕೋರಿ ಸಲ್ಲಿಸಿದ ಅಪೀಲಾಗಿದೆ ಮತ್ತು ಅಪರಾಧಕ್ಕೆ ಗುರಿಯಾಗಿರುವ ವಾಹನದ ವಿಮಾಕರ್ತರು ದಾಖಲಿಸಿದ ಅಪೀಲಾಗಿದೆ. ನ್ಯಾಯಾಧಿಕರಣ ಎಂ.ಎ.ಸಿ.ಸಂಖ್ಯೆ: 85/2008ರಲ್ಲಿ ನಡೆದ ಅಪಘಾತ ಸಂಬಂಧದಲ್ಲಿ ನೀಡಿದ ತೀರ್ಪು ಮತ್ತು ನಿಗದಿಗೊಳಿಸಿದ ನಷ್ಟ ಪರಿಹಾರವನ್ನು ಒಳಗೊಂಡಿದೆ. ನ್ಯಾಯಾಧಿಕರಣ ತನ್ನ ಸಾಮಾನ್ಯ ತೀರ್ಪಿನಲ್ಲಿ ಈ ಎರಡೂ ಜೊತೆಯಲ್ಲಿ ಸೇರಿಸಿದೆ. ವಾದವನ್ನು ಆಲಿಸಿದೆ, ವಿಲೆ ಮಾಡಿದೆ.

4. ಅನುಕೂಲತೆಯ ಉದ್ದೇಶಕ್ಕಾಗಿ ಪಕ್ಷಕಾರರು ಈ ಅಪೀಲುಗಳಲ್ಲಿ ಕ್ಲೇಮುಗಳ ನ್ಯಾಯಾಧಿಕರಣದ ಮುಂದೆ ಅವರು ಇದ್ದ ಶ್ರೇಣಿಗೆ ಅನುಸಾರವಾಗಿ ಉಲ್ಲೇಖಿಸಲಾಗಿದೆ.

5. ಮೊಕದ್ದಮೆಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ಹೇಳಲಾಗಿದೆ:

ಮೃತ ಸುರೇಶ ಹನುಮಂತ ನಾಯಕ್ ದಿನಾಂಕ 25.06.2008ರ ಮಧ್ಯಾಹ್ನ 3 ಗಂಟೆಯ ಸಮಯದಲ್ಲಿ ತನ್ನ ಮೋಟಾರು ಸೈಕಲ್ ಸಂಖ್ಯೆ: ಕೆಎ–31–ಜೆ–7372ರಲ್ಲಿ ಯಲ್ಲಾಪುರದ ಕಡೆ ಹೋಗುತ್ತಿರಬೇಕಾದಾಗ ಡೊಂಗ್ರಿನಲ್ ಗ್ರಾಮದ ಹತ್ತಿರ ಬರುತ್ತಿರುವಾಗ ವಿರುದ್ಧ ದಿಕ್ಕಿನಿಂದ ಸಂಖ್ಯೆ: ಕೆಎ–31/4789 ಟೆಂಪೋ ಟ್ರ್ಯಾಕ್ಸ್‌ನ ಚಾಲಕನು ಅತಿ ವೇಗದಿಂದ ಮತ್ತು ದುಡುಕಿನಿಂದ ಮತ್ತು ನಿರ್ಲಕ್ಷ್ಯತೆಯಿಂದ ವಾಹನ ಚಲಾಯಿಸುತ್ತಾ ಮೋಟಾರು ಸೈಕಲ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮೋಟಾರು ಸೈಕಲ್ ಸವಾರನಾದ ಸುರೇಶ್ ಹನುಮಂತ ನಾಯಕನು ಗಂಭೀರ ಸ್ವರೂಪದ ಗಾಯಗಳಿಂದ ಅದರಲ್ಲೂ ತಲೆಗಾದ ಪೆಟ್ಟಿನಿಂದ ಆಸ್ಪತ್ರೆಗೆ ಕರೆತರುವ ಮಾರ್ಗದಲ್ಲಿಯೇ ಮೃತಪಟ್ಟಿರುವನು. ಈ ಸಂಬಂಧದಲ್ಲಿ ಕ್ಲೇಮುದಾರರು

ಅರ್ಜಿಯಲ್ಲಿ ಮೃತನು ಎಲ್‌ಐಸಿ ಏಜೆಂಟ್ ಆಗಿದ್ದ ತಿಂಗಳಿಗೆ 15,000/– ರು.ಗಳು ಅವನ ಗಳಿಕೆಯಾಗಿತ್ತು ಎಂದು ದೃಢೋಕ್ತಿಯಲ್ಲಿ ತಿಳಿಸಿರುವರು. ಮೃತನ ಮರಣದಿಂದ ಅರ್ಜಿದಾರರ ಕುಟುಂಬದ ಆಧಾರ ಸ್ತಂಭವೇ ಕುಸಿದು ಬಿದ್ದಿದೆ. ಅದರಿಂದಲೇ ಅರ್ಜಿದಾರರು ಮೋಟಾರು ವಾಹನಗಳ ಅಧಿನಿಯಮದ 166ನೇ ಪ್ರಕರಣದ ಅಡಿಯಲ್ಲಿ ಟೆಂಪೋ ಟ್ರ್ಯಾಕ್ಸ್‌ನ ಮಾಲೀಕರ ಮತ್ತು ವಿಮಾಕರ್ತನ ವಿರುದ್ಧ 20,00,000/– ರೂ.ಗಳ ನಷ್ಟ ಪರಿಹಾರವನ್ನು ಕೋರಿ ಕ್ಲೇಮು ಅರ್ಜಿಯನ್ನು ದಾಖಲಿಸಿರುವರು.

6. ತಮ್ಮ ಕ್ಲೇಮಿಗೆ ಪೂರಕವಾಗಿ, ಕ್ಲೇಮುದಾರ ಸಂ.1 ಅನ್ನು ಪ್ರಾ.ಸಾ.1 ಎಂಬಂತೆ ಅಲ್ಲದೆ ಪ್ರಾ.ಸಾ.2 ಪರವಾಗಿಯೂ ಕ್ಲೇಮುದಾರ ಸಂ.1ನ್ನು ಸ್ವತಃ ವಿಚಾರಣೆಗೆ ಗುರಿಪಡಿಸಲಾಗಿದೆ ಮತ್ತು ನಿಶಾನೆ ಪಿ.1ಯಿಂದ ಪಿ.13ರ ವರೆಗೆ ಗುರುತು ಮಾಡಲಾಗಿದೆ. ಪ್ರತ್ಯರ್ಜಿದಾರ–ವಿಮಾಕರ್ತ ಪರವಾಗಿ ಯಾವುವೇ ಮೌಖಿಕ ಅಥವಾ ದಸ್ತಾವೇಜಿನ ಸಾಕ್ಷ್ಯವನ್ನಾಗಲೀ ಒದಗಿಸಲಾಗಿಲ್ಲ. ಅಭಿಲೇಖಿಸಿದ ಮೌಖಿಕ ಮತ್ತು ದಸ್ತಾವೇಜಿನ ಸಾಕ್ಷ್ಯಗಳನ್ನು ಮೌಲ್ಯೀಕರಿಸಿದ ನಂತರ, ನ್ಯಾಯಾಧಿಕರಣವು ಒಟ್ಟು ನಷ್ಟ ಪರಿಹಾರವನ್ನು 9,82,000/– ರೂ.ಗಳನ್ನು ಈ ಮುಂದಿನ ಶೀರ್ಷಿಕೆಗಳಡಿಯಲ್ಲಿ ಐತೀರ್ಪು ನೀಡಿದೆ:

| ಕ್ರ.ಸಂ. | ಶೀರ್ಷಿಕೆ | ಮೊಬಲಗು |
|---|---|---|
| 1. | ಅವಲಂಬನೆಯ ನಷ್ಟ | 9,60,000 |
| 2. | ಅರ್ಜಿದಾರಳಿಗೆ ಆಗಿರುವ ದಾಂಪತ್ಯ ನಷ್ಟ | 10,000 |
| 3. | ಅರ್ಜಿದಾರ ಸಂಖ್ಯೆ: 2 ಮತ್ತು 3ರ ಪ್ರೀತಿ ಮತ್ತು ವಾತ್ಸಲ್ಯ ನಷ್ಟ | 5,000 |
| 4. | ಮೃತ ದೇಹದ ಸಾಗಣೆ ವೆಚ್ಚ | 2,000 |
| 5. | ಅಂತ್ಯಸಂಸ್ಕಾರ ವೆಚ್ಚ | 5,000 |
| | ಒಟ್ಟು | 9,82,000 |

7. ನ್ಯಾಯಾಧಿಕರಣದ ಮುಂದೆ ವಿಚಾರಣೆ ನಡೆಯುವ ಅವಧಿಯಲ್ಲಿ, ಕ್ಲೇಮುದಾರರು ಅಪಘಾತ ಸಂಭವಿಸಿರುವುದನ್ನು, ಅಪರಾಧಕ್ಕೆ ಗುರಿಯಾದ ವಾಹನವನ್ನು ಅದರ ಚಾಲಕ ದುಡುಕು ಮತ್ತು ನಿರ್ಲಕ್ಷ್ಯತೆಯಿಂದ ಚಲಾಯಿಸಿರುವ ಬಗೆಯನ್ನು ಮತ್ತು ವಾಹನವು ವಿಮೆಯ ಸೌಲಭ್ಯಕ್ಕೆ ಒಳಪಟ್ಟಿರುವುದನ್ನು ಸುಸ್ಥಾಪಿಸಿರುವರು. ಈ ಸಂಬಂಧದಲ್ಲಿ ಮೃತ ಸುರೇಶ ಹನುಮಂತನಾಯಕನ ಅವಲಂಬಿತರು ನ್ಯಾಯಾಧಿಕರಣವು ನೀಡಿದ ನಷ್ಟ ಪರಿಹಾರದ ಮೊಬಲಗಿನ ಪ್ರಮಾಣವು ತೃಪ್ತಿಕರವಾಗಿಲ್ಲವೆಂದು ನಷ್ಟ ಪರಿಹಾರದ ಮೊಬಲಗಿನ ಪ್ರಮಾಣವನ್ನು ಹೆಚ್ಚಿಸಬೇಕೆಂದು ಕೋರಿ ಎಂ.ಎಫ್.ಎ. ಸಂಖ್ಯೆ: 21386/2011 ಅಪೀಲು ಅರ್ಜಿಯನ್ನು ಸಲ್ಲಿಸಿರುವರು. ಇದರಿಂದ ವಿಮಾಕರ್ತರು ನಷ್ಟಪರಿಹಾರದ ಪ್ರಮಾಣವನ್ನು ಪ್ರಶ್ನಿಸಿ ಎಂಎಫ್ಎ ಸಂಖ್ಯೆ: 21592/2011 ಅರ್ಜಿ ಸಲ್ಲಿಸಿರುವರು.

8. ಕ್ಲೇಮುದಾರರ ಪರವಾಗಿ ಮಾನ್ಯ ನ್ಯಾಯವಾದಿ ಶ್ರೀ ಟಿ.ಎಂ. ನದಾಫ್ ಅವರು ಎಂಎಫ್ಎ ಸಂಖ್ಯೆ: 21386/2011ರಲ್ಲಿ ನ್ಯಾಯಾಧಿಕರಣವು ಕ್ಲೇಮುದಾರರಿಗೆ 'ಅವಲಂಬಿತ ನಷ್ಟ' ದ ಶೀರ್ಷಿಕೆಯ ಅಡಿಯಲ್ಲಿ ನಷ್ಟ ಪರಿಹಾರದ ಮೊಬಲಗನ್ನು ಸೂಕ್ತವಾಗಿ ನೀಡಿರುವುದಿಲ್ಲವೆಂದು ಕ್ಲೇಮುದಾರರು ತಮ್ಮ ಜೀವನೋಪಾಯಕ್ಕೆ ಆಧಾರಸ್ತಂಭವಾಗಿದ್ದ ಮೃತರನ್ನು ಕಳೆದುಕೊಂಡು ಕುಟುಂಬ ಹೇಗೆ ಕಂಗೆಟ್ಟಿದೆ ಎಂಬುದನ್ನು ತುಂಬಾ ಭಾವೋದ್ವೇಗದಲ್ಲಿ ವಾದವನ್ನು ನಿವೇದಿಸಿರುವರು. ಅವರು ತಮ್ಮ ವಾದವನ್ನು ಪುಷ್ಟೀಕರಿಸುವುದಕ್ಕಾಗಿ ಮೃತರು 37ನೇ ವಯಸ್ಸಿನಲ್ಲಿಯೇ ಮರಣವನ್ನಪ್ಪಿರುವುದು ಹಾಗೂ ಮೃತನು ಎಲ್ಐಸಿ ಏಜೆಂಟ್ ವೃತ್ತಿಯನ್ನು ಮಾಡುತ್ತಿದ್ದು ಅವನ ತಿಂಗಳ ವರಮಾನ 15,000/– ರೂ.ಗಳಾಗಿರುತ್ತವೆ ಎಂದು ವಾದವನ್ನು ಮಂಡಿಸಿರುತ್ತಾರೆ. ಮುಂದುವರೆದು, ಮೃತನು ಇಡೀ ಕುಟುಂಬದ ಹೊಣೆಯನ್ನು ಹೊತ್ತಿದ್ದು, ಮೊದಲ ಕ್ಲೇಮುದಾರ ಮೃತನ ಪತ್ನಿಯಾಗಿದ್ದು, ಎರಡನೇ ಮತ್ತು ಮೂರನೇ ಕ್ಲೇಮುದಾರರು ಮೃತನ ಅಪ್ರಾಪ್ತ ವಯಸ್ಸಿನ ಮಕ್ಕಳಾಗಿರುತ್ತಾರೆ ಎಂದು ನಷ್ಟ ಪರಿಹಾರವನ್ನು ಹೆಚ್ಚಿಸುವುದಕ್ಕಾಗಿ ತಮ್ಮ ಮೊಕದ್ದಮೆಯನ್ನು ಸುಸ್ಥಾಪಿಸುವುದಕ್ಕೆ ಕ್ಲೇಮುದಾರರು ಹಾಜರುಪಡಿಸಿದ ದಸ್ತಾವೇಜಿನಲ್ಲಿರುವಂತೆ ಪ್ರಾ.ಸಾ.1 ಮತ್ತು ಪ್ರಾ.ಸಾ.2ರ ಸಾಕ್ಷ್ಯವನ್ನು ಪರಿಗಣಿಸುವ

ಮೂಲಕ ಮೃತರ ಆದಾಯವನ್ನು ಪುನರ್ ನಿರ್ಧರಿಸಬೇಕೆಂದು ಅಗತ್ಯಪಡಿಸಿ ಅಪೀಲು ಅರ್ಜಿಯಲ್ಲಿ ನಿವೇದಿಸಿರುವರು.

ಇನ್ನು ಮುಂದುವರೆದು, ನ್ಯಾಯಾಧಿಕರಣವು ಸಾಂಪ್ರದಾಯಿಕ ಶೀರ್ಷಿಕೆಯ ಅಡಿಯಲ್ಲಿ ಯುಕ್ತವಾದ ನಷ್ಟಪರಿಹಾರವನ್ನು ನೀಡುವಲ್ಲಿಯೂ ಸಹ ತಪ್ಪು ಮಾಡಿದೆ. ಮೃತರ ಅಕಾಲ ಮೃತ್ಯುವಿನಿಂದ ಅಪೀಲುದಾರರು ಕ್ಲೇಮುವಾರು ಅವರ ಕುಟುಂಬದ ಮುಖ್ಯಸ್ಥನನ್ನೇ ಕಳೆದುಕೊಂಡಿರುವುದನ್ನು ಗಮನಕ್ಕೆ ತಂದುಕೊಳ್ಳುವಲ್ಲಿಯೂ ನ್ಯಾಯಾಧಿಕರಣವು ತಪ್ಪು ಮಾಡಿದೆ ಎಂದು ಅಪೀಲು ಅರ್ಜಿಯಲ್ಲಿ ನಿವೇದಿಸಿರುವರು. ಹಾಗಾಗಿ, ಅಭಿಲೇಖಿಸಿದ ಸಾಕ್ಷ್ಯವನ್ನು ಪರಿಗಣಿಸುವ ಮೂಲಕ ಸಾಂಪ್ರದಾಯಿಕ ಶೀರ್ಷಿಕೆಯಡಿಯಲ್ಲಿ ನಷ್ಟ ಪರಿಹಾರವನ್ನು ಪುನರ್ ವಿವೇಚಿಸಲು ಮತ್ತು ಮಾರ್ಪಾಡಿಸಲು ಅಗತ್ಯಪಡಿಸಿರುವರು. ಅವರು ವಾದವನ್ನು ಮುಂದುವರೆಸಿ ಮೃತನು ಎಲ್‌ಐಸಿ ಏಜೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಎಂಬುದನ್ನು ಸೂಚಿಸಲು ಎಲ್‌ಐಸಿಯೂ ಹೊರಡಿಸಿದ ಪ್ರಮಾಣಪತ್ರವು ನಿಶಾನೆ ಪಿ.10 ಮತ್ತು ಪಿ.11ರಲ್ಲಿದೆ. ಮುಂದುವರೆದು, ಕ್ಲೇಮುದಾರರು ಮೃತನ ಆದಾಯವನ್ನು ನಿರ್ಧರಿಸುವುದಕ್ಕಾಗಿ 2004–2005, 2005–2006, 2006–2007 ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್ ಅನ್ನು ಹಾಜರುಪಡಿಸಿರುವರು ಮತ್ತು ಮೃತನು ತನ್ನ ಎಲ್ಲಾ ಲೆಕ್ಕಗಳನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ನಿರ್ವಹಿಸುತ್ತಿದ್ದ ಎಲ್ಲ ದಾಖಲೆಯನ್ನು ಸಹ ಹಾಜರುಪಡಿಸಿರುವರು. ಮೇಲಿನ ದಸ್ತಾವೇಜಿನಿಂದ ಮೃತನ ತಿಂಗಳ ಆದಾಯವು 15,000/–ಕ್ಕಿಂತ ಹೆಚ್ಚಿನ ಆದಾಯವನ್ನು ಹೊಂದಿರುವುದನ್ನು ತಿಳಿಯಬಹುದಾಗಿದೆ. ಸದರಿ ದಸ್ತಾವೇಜಿಗೆ ವಿರುದ್ಧವಾಗಿ ನ್ಯಾಯಾಧಿಕರಣವು ಮೃತನ ತಿಂಗಳ ಒಟ್ಟು ಆದಾಯವನ್ನು 9,000/– ರೂ.ಗಳೆಂದು ಪರಿಗಣಿಸಿದೆ ಮತ್ತು 'ಅವಲಂಬಿತ ನಷ್ಟ'ವನ್ನು ಸೇರಿದಂತೆ ಪಾವತಿಸಬೇಕಾದ ನಷ್ಟ ಪರಿಹಾರವನ್ನು ನಿರ್ಧರಿಸುವಲ್ಲಿಯೂ ನ್ಯಾಯಾಧಿಕರಣ ತಪ್ಪನ್ನು ಎಸಗಿದೆ ಎಂದು ವಿವರವಾಗಿ ನಿವೇದಿಸಿರುವರು. ಮತ್ತಷ್ಟು ಮುಂದುವರೆದು ನ್ಯಾಯಾಧಿಕರಣವು ಸಾಂಪ್ರದಾಯಿಕ ಶೀರ್ಷಿಕೆಯ ಅಡಿಯಲ್ಲಿ ನೀಡಲಾದ ನಷ್ಟಪರಿಹಾರವು ಸಹ ತುಂಬಾ ಕಡಿಮೆ ಮೊತ್ತವಾಗಿದೆ. ಹಾಗೆಯೇ, ಮೃತನ ಆದಾಯದ ಸಂಬಂಧದಲ್ಲಿ 2006–2007ನೇ ವರ್ಷದ ಆದಾಯ ತೆರಿಗೆ ರಿಟರ್ನ್ಸ್

ನಿಶಾನೆ ಪಿ.6ನ್ನು ನ್ಯಾಯಾಲಯದ ಗಮನಕ್ಕೆ ತರುತ್ತಾ, ಮೃತನ ಆದಾಯ 2006–2007ನೇ ವರ್ಷದ ಆದಾಯ 1,53,000/– ಆಗಿದ್ದು ಅದನ್ನು ಹನ್ನೆರಡು ತಿಂಗಳಿಗೆ ಸರಿಯಾಗಿ ವಿಭಾಗಿಸಿದರೆ ಮೃತನ ತಿಂಗಳ ಆದಾಯವು 12,750 ರೂ.ಗಳಾಗುತ್ತವೆ. ಈ ದಸ್ತಾವೇಜಿನ ಸಾಕ್ಷ್ಯವನ್ನು ನ್ಯಾಯಾಲಯವು ನಂಬದೇ ಇರಲು ಯಾವುದೇ ಕಾರಣವು ಇರುವುದಿಲ್ಲ ಎಂದು ನಿವೇದಿಸಿರುವರು. ತಮ್ಮ ನಿವೇದನೆಗಳನ್ನು ಸಮರ್ಥಿಸುವುದಕ್ಕಾಗಿ ನ್ಯಾಯವಾದಿಗಳು ಸರ್ವೋಚ್ಚ ನ್ಯಾಯಾಲಯವು ***ರಾಜೇಶ್ ಮತ್ತು ಇತರರು –ವಿರುದ್ಧ– ರಾಜಬೀರ್ ಸಿಂಗ್ ಮತ್ತು ಇತರರು*** [1] ಮೊಕದ್ದಮೆಯಲ್ಲಿ ನೀಡಿದ ತೀರ್ಪನ್ನು ಅವಲಂಬನೆಯಾಗಿ ಮಂಡಿಸಿರುವರು.

ಅಲ್ಲದೆ, ಅಪಘಾತ ನಡೆದ ದಿನಾಂಕಕ್ಕೆ ಮೃತನ ವೃತ್ತಿ ಮತ್ತು ವಯಸ್ಸನ್ನು ಪರಿಗಣನೆಗೆ ತೆಗೆದುಕೊಂಡು, ಈ ಮೊಕದ್ದಮೆಯನ್ನು ಸುಸ್ಥಾಪಿಸುವುದಕ್ಕಾಗಿ ಕ್ಲೇಮುದಾರರು ಹಾಜರುಪಡಿಸಿದ ದಸ್ತಾವೇಜುಗಳಾದ ಪ್ರಾ.ಸಾ.1 ಮತ್ತು ಪ್ರಾ.ಸಾ.2 ಅನ್ನು ಸಾಕ್ಷಿಯಾಗಿ ಇಟ್ಟುಕೊಂಡು ನೀಡಲಾದ ನಷ್ಟ ಪರಿಹಾರವನ್ನು ಮರು ವಿವೇಚಿಸಲು ಅಗತ್ಯಪಡಿಸಿ ಈ ಅಪೀಲನ್ನು ಸಲ್ಲಿಸಲಾಗಿದೆ.

ಈ ಎಲ್ಲಾ ಕಾರಣಗಳ ಮೇಲೆ, ಕ್ಲೇಮುದಾರರು ದಾಖಲಿಸಿದ ಅಪೀಲನ್ನು ಪುರಸ್ಕರಿಸಬೇಕೆಂದು ಮತ್ತು ನ್ಯಾಯಾಧಿಕರಣವು ತೀರ್ಮಾನಿಸಿದ ನಷ್ಟ ಪರಿಹಾರವನ್ನು ಹೆಚ್ಚಿಸಬೇಕೆಂದು ನ್ಯಾಯವಾದಿಗಳು ಪ್ರಾರ್ಥಿಸಿರುವರು.

9. ಮತ್ತೊಂದು ಕಡೆಯಲ್ಲಿ, ವಿಮಾಕರ್ತನ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಶ್ರೀ ನಾಗನಗೌಡ ಆರ್. ಕುಪ್ಪಲೂರ ಅವರು ಎಂ.ಎಫ್.ಎ. ಸಂಖ್ಯೆ: 21592/2011ರಲ್ಲಿ ಮೃತನ 2004–2005, 2005–2006 ವರ್ಷಗಳಲ್ಲಿ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಪ್ರತಿ ವರ್ಷ 37,000/– ರೂ. ಮಾತ್ರವೇ ಮೃತನ ಆದಾಯವೆಂದು ಬಹಿರಂಗವಾಗಿದೆ ಎಂದು ನಿವೇದಿಸಿರುವರು. ಮೃತನು ಎಲ್‌ಐಸಿಯ

1. 2013 ಎಸಿಜೆ 1403

ನಿಯತ ನೌಕರನಾಗಿರುವುದಿಲ್ಲ. ಆದರೆ ಮೃತನು ಅದರ ಏಜೆಂಟ್ ಆಗಿರುತ್ತಾನೆ ಮತ್ತು ಎಲ್ಐಸಿ ಪಾವತಿಸುವ ಕಮೀಷನ್ ಹಣವು ವರ್ಷದಿಂದ ವರ್ಷಕ್ಕೆ ವ್ಯತ್ಯಯವಾಗಿರುತ್ತವೆ. ಹಾಗಾಗಿ, ಯಾವುದೇ ರುಜುವಾತು ಆದಾಯದ ಗೈರು ಹಾಜರಿಯಲ್ಲಿ, ನ್ಯಾಯಾಧಿಕರಣವು 'ಅವಲಂಬಿತ ನಷ್ಟ'ಕ್ಕೆ ಪಾವತಿಸುವ ನಷ್ಟಪರಿಹಾರವನ್ನು ನಿರ್ಧರಿಸುವುದಕ್ಕಾಗಿ ಮೃತನ ತಿಂಗಳ ಆದಾಯ 9,000/– ರೂ.ಗಳೆಂದು ತೆಗೆದುಕೊಂಡಿರುವುದು ಅಷ್ಟು ಸಮರ್ಥನೀಯವಾಗಿಲ್ಲ ಮತ್ತು 'ಅವಲಂಬಿತ ನಷ್ಟ'ಕ್ಕೆ ತೀರ್ಮಾನಿಸಲಾದ ನಷ್ಟಪರಿಹಾರವನ್ನು ಕಡಿಮೆಗೊಳಿಸಬೇಕೆಂದು ಕೋರಿ ಅಪೀಲಿನಲ್ಲಿ ನಿವೇದಿಸಿರುವರು. ಮುಂದುವರೆದು, ಅವಲಂಬಿತ ನಷ್ಟದ 9,60,000/– ರೂ.ಗಳ ಅತಿ ದುಬಾರಿಯಾದ ಮೊತ್ತವಾಗಿದೆ. ಆದುದರಿಂದ, ನ್ಯಾಯಾಧಿಕರಣವು ಇತರ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ತೀರ್ಮಾನಿಸಿದ ನಷ್ಟ ಪರಿಹಾರದ ಮೊತ್ತವನ್ನು ಮತ್ತಷ್ಟು ಕಡಿಮೆ ಮಾಡುವುದು ನ್ಯಾಯಯುತವಾದುದು ಎಂದು ನಿವೇದಿಸಿರುವರು.

10. ಎರಡೂ ಪಕ್ಷಕಾರರ ಎರಡೂ ಅಪೀಲುಗಳಲ್ಲಿ ಮಾನ್ಯ ನ್ಯಾಯವಾದಿಗಳು ನಿವೇದಿಸಿದ ವಾದಗಳನ್ನು ಬಹು ಜಾಗರೂಕತೆಯಿಂದ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಮತ್ತು ಈಗಾಗಲೇ ಪ್ರಶ್ನಿತ ತೀರ್ಪನ್ನು ಮತ್ತು ನೀಡಲಾದ ನಷ್ಟ ಪರಿಹಾರವನ್ನು ಅವಲೋಕಿಸಲಾಗಿದೆ. ಈಗ ನಾವು ಪರಿಗಣಿಸಬೇಕಾದುದು ನ್ಯಾಯಾಧಿಕರಣವು ನೀಡಿದ ನಷ್ಟ ಪರಿಹಾರದ ಪ್ರಮಾಣವು ನ್ಯಾಯಯುತವಾದುದೇ ಮತ್ತು ಸಮಂಜಸವಾದುದೇ ಎಂಬುದನ್ನು. ಹಾಗಾಗಿ, ಈ ಅಪೀಲಿನಲ್ಲಿ 25.06.2008ರ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಮೃತ ಸುರೇಶ್ ಹನುಮಂತ ನಾಯಕ್ ಸಂಖ್ಯೆ: ಕೆಎ 31–ಜೆ–7372ರಲ್ಲಿ ನೋಂದಾಯಿತನಾಗಿರುವ ಮೋಟಾರು ಸೈಕಲ್ಲಿನಲ್ಲಿ ಯಲ್ಲಾಪುರದ ಕಡೆಗೆ ಹೋಗುತ್ತಿರುವಾಗ ಅಪಘಾತವಾಗಿ ಸಾವನ್ನಪ್ಪಿರುವುದು ಕಂಡು ಬಂದ ಅಂಶವು ಸತ್ಯವಾಗಿರುತ್ತದೆ. ಆಪಾದನೆಗೆ ಗುರಿಯಾಗಿರುವ ಟೆಂಪೋ ಟ್ರ್ಯಾಕ್ಸ್ ವಾಹನವು ಸಂಖ್ಯೆ:ಕೆಎ–31/4789ರಲ್ಲಿ ನೋಂದಾಯಿತವಾಗಿದೆ. ಈ ವಾಹನವು ವಿರುದ್ಧ ದಿಕ್ಕಿನಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸಿದ

ಕಾರಣ ಮೋಟಾರ್ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಉಂಟಾಗಿರುತ್ತದೆ. ಅದರ ಪರಿಣಾಮವಾಗಿ ಮೋಟಾರು ವಾಹನದ ಚಾಲಕನಾದ ಸುರೇಶ ಹನುಮಂತ ನಾಯಕ್ ಗಂಭೀರ ಗಾಯಗಳಿಂದ ಬಾಧಿತನಾಗಿರುತ್ತಾನೆ. ಗಂಭೀರ ಗಾಯಗಳ ಕಾರಣದಿಂದಲೇ ಸಾವನ್ನಪ್ಪಿರುತ್ತಾನೆ.

ಮೃತ ವ್ಯಕ್ತಿಯ ವಯಸ್ಸು 37 ವರ್ಷಗಳು ಮತ್ತು ಅವನು ವೃತ್ತಿಯಲ್ಲಿ ಎಲ್ಐಸಿಯ ಏಜೆಂಟ್‌ನಾಗಿರುತ್ತಾನೆ ಮತ್ತು ಮೃತನ ಅನಿರೀಕ್ಷಿತ ಸಾವಿನ ಕಾರಣದಿಂದ ಕ್ಲೇಮುದಾರರು ತಮ್ಮ ಕುಟುಂಬದ ಏಕೈಕ ಆಧಾರ ಸ್ತಂಭವಾಗಿದ್ದ ಕುಟುಂಬದ ಮುಖ್ಯಸ್ಥನು ಆಗಿದ್ದ ಮೃತನನ್ನು ಕಳೆದುಕೊಂಡಿರುತ್ತಾರೆ ಮತ್ತು ಮೃತನ ಈ ಅನಿರೀಕ್ಷಿತ ಸಾವಿನಿಂದ ಅವನ ಅವಲಂಬಿತರಾಗಿರುವ ಅವನ ಹೆಂಡತಿ ಮತ್ತು ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳು ಮಾನಸಿಕ ಕ್ಷೋಭೆಗೆ ಒಳಗಾಗಿರುವರು ಮತ್ತು ಸಮಾಜದಲ್ಲಿ ಅವರ ಆರ್ಥಿಕ ಸ್ಥಿತಿಗೂ ಪೆಟ್ಟು ಬಿದ್ದಿರುತ್ತದೆ. ಆದುದರಿಂದ ಮೃತನ ವಯಸ್ಸು ಮತ್ತು ಅವನ ವೃತ್ತಿಯಾದ ಎಲ್.ಐ.ಸಿ. ಏಜೆಂಟನ ವೃತ್ತಿಯನ್ನು ಪರಿಗಣನೆಗೆ ತೆಗೆದುಕೊಳ್ಳಲು ನಿಶಾನೆ.ಪಿ1 ರಿಂದ ಪಿ.13ರ ವರೆಗೆ ಹಾಜರುಪಡಿಸಿದ ದಸ್ತಾವೇಜುಗಳನ್ನು, ಪ್ರಾ.ಸಾ.1 ಮತ್ತು ಪ್ರಾ.ಸಾ.2 ಇವರ ಸಾಕ್ಷ್ಯಗಳನ್ನು ಗಮನಕ್ಕೆ ತೆಗೆದುಕೊಂಡು ನಷ್ಟ ಪರಿಹಾರವನ್ನು ಅಗತ್ಯವಾಗಿ ಪುನರ್ ನಿರ್ಧರಿಸಬೇಕಾಗಿದೆ. ನಿಶಾನೆ ಪಿ.10 ಮತ್ತು ಪಿ.12ರಲ್ಲಿ ಹಾಜರುಪಡಿಸಿದ ಎಲ್.ಐ.ಸಿಯ ದಸ್ತಾವೇಜಿನಲ್ಲಿ ಮೃತನು ವೃತ್ತಿಯಲ್ಲಿ ಎಲ್.ಐ.ಸಿಯ ಏಜೆಂಟ್ ಆಗಿರುತ್ತಾನೆ. ಅಲ್ಲದೆ, ಕ್ಲೇಮುದಾರರು ಮೃತನು ನಿರ್ವಹಿಸಿದ 2004-05, 2005-06, 2006-07ರ ಆದಾಯ ತೆರಿಗೆ ರಿಟರ್ನ್ಸ್ ಮತ್ತು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನಿರ್ವಹಿಸಲಾದ ಬಾಕಿಯ ವಿವರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವರು. ಮೇಲಿನ ದಸ್ತಾವೇಜುಗಳಿಂದ, ಮೃತನ ಪ್ರತಿ ತಿಂಗಳ ಆದಾಯವು 15,000/- ರೂ.ಗಳಿಗಿಂತ ಹೆಚ್ಚಾಗಿದೆ ಎಂದು ಹಾಜರು ಪಡಿಸಿದ ದಸ್ತಾವೇಜುಗಳಿಂದ ಮನವರಿಕೆಯಾಗುತ್ತದೆ. ಈ ವಾದಾಂಶದಿಂದಲೇ ಅಪೀಲುದಾರರ ಮಾನ್ಯ ನ್ಯಾಯವಾದಿಗಳು ನಷ್ಟ ಪರಿಹಾರದ ಮೊತ್ತವನ್ನು ಹೆಚ್ಚು ಮಾಡುವಂತೆ ಕೋರಿರುವುದು ಕಂಡು ಬರುತ್ತದೆ.

ಹೀಗಿರುವಾಗ ನ್ಯಾಯಾಧಿಕರಣವು ಸದರಿ ದಸ್ತಾವೇಜಿನ ಸಾಕ್ಷ್ಯಕ್ಕೆ ವಿರುದ್ಧವಾಗಿ ಮೃತನ ಮಾಸಿಕ ಒಟ್ಟು ಆದಾಯವು 9,000/– ಎಂದು ಪರಿಗಣಿಸಿ ಅವಲಂಬಿತ ನಷ್ಟದ ಶೀರ್ಷಿಕೆಯ ಅಡಿಯಲ್ಲಿ ಪಾವತಿಸಬೇಕಾದ ನಷ್ಟ ಪರಿಹಾರವನ್ನು ನಿರ್ಧರಿಸಿರುವುದು ತಪ್ಪೆಂದು ಕಂಡುಬರುತ್ತದೆ. ಈ ವಾದಾಂಶವನ್ನು ಅಪೀಲುದಾರರ ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸಿದ ಅವಧಿಯಲ್ಲಿ ಅವಲಂಬಿತ ನಷ್ಟದ ಶೀರ್ಷಿಕೆಯ ಅಡಿಯಲ್ಲಿ ನಷ್ಟ ಪರಿಹಾರವನ್ನು ಹೆಚ್ಚಿಸಲು ಮತ್ತು ಅದರಂತೆಯೇ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ನಷ್ಟವನ್ನು ಹೆಚ್ಚಿಸುವುದಕ್ಕೆ ಕೋರಿರುತ್ತಾರೆ.

11. ಮೊಕದ್ದಮೆಯ ಮತ್ತೊಂದು ಕಡೆಯಲ್ಲಿ, ಅಪಾದನೆಗೆ ಗುರಿಯಾದ ವಾಹನದಿಂದ ಸಂಭವಿಸಿದ ಅಪಘಾತವು, ಆ ವಾಹನದ ಚಾಲಕನ ಅತಿವೇಗ, ನಿರ್ಲಕ್ಷತೆಯಿಂದ ವಾಹನ ಚಲಾಯಿಸಿದ ಕಾರಣದಿಂದ ನಡೆದ ಅಪಘಾತವಾಗಿದ್ದು, ಸುರೇಶ ಹನುಮಂತ ನಾಯಕನು ಸಾವನ್ನಪ್ಪಿರುವುದು ಅಪಘಾತದ ಸಮಯದಲ್ಲಿ ಆ ವಾಹನವು ವಿಮೆಗೆ ಒಳಪಟ್ಟಿರುವುದು ಈ ವಿಷಯ ಸಂಬಂಧದಲ್ಲಿ ಯಾವುದೇ ವಿವಾದವು ಇರುವುದಿಲ್ಲ. ಇಲ್ಲಿ ಪರಿಗಣಿಸಬೇಕಾದ ಅಂಶಗಳು ಯಾವುವೆಂದರೆ, ನ್ಯಾಯಾಧಿಕರಣವು ಮೃತನ ಮಾಸಿಕ ಆದಾಯವು 9,000/– ಎಂದು ನಿರ್ಧರಿಸಿರುವುದು ನ್ಯಾಯಯುತವಾದುದೇ ಮತ್ತು ಸಮರ್ಪಕವಾದುದೇ ಎಂಬುದು ಮತ್ತು ಇತರ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ನೀಡಲಾದ ನಷ್ಟ ಪರಿಹಾರವು ಸಮರ್ಥನೀಯವಾಗಿದೆಯೇ ಎಂಬುದನ್ನು ನಿರ್ಧರಿಸಬೇಕಾದ ಅಂಶವಾಗಿದೆ.

12. ನೋಂದಾಯಿತ ಎಲ್.ಐ.ಸಿ. ಏಜೆಂಟ್ ಆಗಿರುವ 37 ವರ್ಷ ವಯಸ್ಸಿನ ಮೃತನು ಅಪಘಾತದಲ್ಲಿ ಮರಣ ಹೊಂದಿರುತ್ತಾನೆ. ಈ ಸಂಬಂಧದಲ್ಲಿ ಮೃತನ ಸಂಬಂಧಪಟ್ಟ ಆದಾಯವನ್ನು ನಿಶಾನೆ ಪಿ.10ರಲ್ಲಿರುವಂತೆ ಅಂಗೀಕರಿಸಲಾಗಿದೆ. ಸಿಂಡಿಕೇಟ್ ಬ್ಯಾಂಕಿನಲ್ಲಿ ಮೃತನು ನಿರ್ವಹಿಸಿದ ನಿಶಾನೆ ಪಿ.9 ರಲ್ಲಿರುವ ಬ್ಯಾಂಕ್ ಖಾತೆಯ ತಃಖ್ತೆಯನ್ನು ನಿಶಾನೆ ಪಿ.6, ಪಿ.7, ಪಿ.8 ರಲ್ಲಿರುವ ಆದಾಯತೆರಿಗೆ ರಿಟರ್ನ್ಸ್‌ಗಳ ವಿವರಣಾ ಪಟ್ಟಿಯನ್ನು ತುಂಬಾ ಜಾಗರೂಕತೆಯಿಂದ ಪರಿಶೀಲಿಸಲಾಗಿ,

2004–05, 2005–06 ರಲ್ಲಿ ಮೃತನ ಒಟ್ಟು ವಾರ್ಷಿಕ ಆದಾಯವು 37,000/– ಆಗಿದ್ದು 2006–07ರ ವರ್ಷಕ್ಕಾಗಿ ಮೃತನ ವಾರ್ಷಿಕ ಆದಾಯ 1,53,000/– ಆಗಿರುತ್ತದೆ. ಇದರಿಂದ ಮೃತನ ವಾರ್ಷಿಕ ಆದಾಯವು ವರ್ಷದಿಂದ ವರ್ಷಕ್ಕೆ ವ್ಯತ್ಯಾಸಗೊಂಡಿದೆ ಮತ್ತು ಮೃತನ ವಾರ್ಷಿಕ ಆದಾಯದಲ್ಲಿ ಏರಿಳಿತ ಕಂಡುಬರುತ್ತದೆ. ಹಾಗಾಗಿ, ನಿಶಾನೆ ಪಿ.7ರಲ್ಲಿ ಸದರಿ ನಿರ್ದಿಷ್ಟ ವರ್ಷಕ್ಕಾಗಿ 1,53,000/– ಗಳು ಮೃತನ ವಾರ್ಷಿಕ ಆದಾಯವಾಗಿದೆ ಎಂದು ಸೂಚಿಸಿದೆ. ಮೃತನು ಎಲ್.ಐ.ಸಿ.ಯ ನಿಯತ ನೌಕರನಾಗಿರುವುದಿಲ್ಲ. ಮೃತನ 2006–07ರ ವರ್ಷದ ಆದಾಯವು 1,53,000/– ರೂ.ಗಳಾಗಿರುತ್ತದೆ. ಕ್ಲೇಮುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಾಡಿದ ನಿವೇದನೆಗಳಲ್ಲಿ ಕೆಲವೊಂದನ್ನು ಪರಿಣಾಮಕಾರಿಯಾಗಿ ಪರಿಗಣಿಸಬೇಕಾಗಿದೆ. ಅಂಥ ಸಂದರ್ಭಗಳಲ್ಲಿ, ಅಪಘಾತದ ದಿನಾಂಕಕ್ಕೆ ಸಂಬಂಧಿಸಿದಂತೆ ಮೃತನ ವೃತ್ತಿ, ಮೃತನ ವಯಸ್ಸು ಪರಿಗಣನೆಗೆ ತೆಗೆದುಕೊಂಡು, ನ್ಯಾಯದ ಹಿತದೃಷ್ಟಿಯಿಂದ ಮೃತನ ಸರಾಸರಿ ಮಾಸಿಕ ಆದಾಯವಾಗಿ 10,500/–ರೂ.ಗಳನ್ನು ತೆಗೆದುಕೊಳ್ಳಲಾಗಿದೆ. ಮೃತನ 37ನೇ ವಯಸ್ಸಿನ ಸಂಬಂಧದಲ್ಲಿ ಅವನ ವೈಯಕ್ತಿಕ ಮತ್ತು ಜೀವನೋಪಾಯ ವೆಚ್ಚವಾಗಿ ಮೂರನೇ ಒಂದರಷ್ಟನ್ನು ಕಡಿತಮಾಡುವುದು ನ್ಯಾಯಯುತವಾದುದು ಮತ್ತು ಯುಕ್ತವಾದುದು. ಆದುದರಿಂದ ಕ್ಲೇಮುದಾರರಿಗೆ ಆಗಿರುವ ಅವಲಂಬಿತ ನಷ್ಟ ವಾಗಿ 12,60,000/– ರೂ.ಗಳನ್ನು (10,500 – 1/3 (3,500) = 7,000 x 12 x 15 = 12,60,000/–) ಪಡೆಯಲು ಕ್ಲೇಮುದಾರರು ಹಕ್ಕುಳ್ಳವರಾಗಿರುವರು.

13. ಆದುದರಿಂದ ಈಗ ಇತರ ಸಾಂಪ್ರದಾಯಿಕ ಶೀರ್ಷಿಕೆಗಳಡಿಯಲ್ಲಿ ಪಡೆಯುವ ಪರಿಹಾರವೆಷ್ಟು ಎಂಬುದು ಮುಂದಿನ ಪ್ರಶ್ನೆಯಾಗಿದೆ. ಮೇಲೆ ಉಲ್ಲೇಖಿಸಲಾದ ಸರ್ವೋಚ್ಚ ನ್ಯಾಯಾಲಯವು ರಾಜೇಶ್ ಮೊಕದ್ದಮೆಯಲ್ಲಿ, ಮಂಡಿಸಿದ ಕಾನೂನಿನ ಅಭಿವ್ಯಕ್ತಿಯಲ್ಲಿ ಮತ್ತು ಮೃತನು ತನ್ನ ಹೆಂಡತಿ ಮತ್ತು ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಅಕಾಲದಲ್ಲಿ ಅಗಲಿರುವ ಸಂದರ್ಭದಲ್ಲಿ ಅವರಿಗೆ ಶಾಶ್ವತವಾಗಿ ನಷ್ಟವಾಗಿರುವ ಪ್ರೀತಿ ಮತ್ತು ವಾತ್ಸಲ್ಯದ ನಷ್ಟಕ್ಕೆ ಹಾಗೂ ಮಕ್ಕಳ ತಂದೆಯಾಗಿ ಕುಟುಂಬದ ಏಕೈಕ ದುಡಿಯುವ ವ್ಯಕ್ತಿಯಾಗಿರುವುದನ್ನು

ಪರಿಗಣಿಸಿ ನ್ಯಾಯಾಧಿಕರಣವು ಇತರ ಸಾಂಪ್ರದಾಯಿಕ ಶೀರ್ಷಿಕೆಗಳಡಿಯಲ್ಲಿ ನಿರ್ಧರಿಸಿದ ನಷ್ಟ ಪರಿಹಾರದ ಮೊಬಲಗು ತುಂಬಾ ಕಡಿಮೆಯಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ***ಸಂತೋಷ್ ದೇವಿ –ವಿರುದ್ಧ– ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್***[2] ಮತ್ತು ***ಸರಳ ವರ್ಮ –ವಿರುದ್ಧ– ದೆಹಲಿ ಸಾರಿಗೆ ನಿಗಮ***[3] ಮೊಕದ್ದಮೆಯಲ್ಲಿ ನೀಡಿದ ತೀರ್ಪನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಮೇಲೆ ಉಲ್ಲೇಖಿಸಿದ ಮೊಕದ್ದಮೆಯ ಸಂಬಂಧದಲ್ಲಿ ಮರಣಾಂತಿಕ ಅಪಘಾತದಲ್ಲಿ ಮೃತ ವ್ಯಕ್ತಿಯೂ ಸ್ವ–ಉದ್ಯೋಗಿಯಾಗಿದ್ದಲ್ಲಿ ಅಥವಾ ನಿಗದಿತ ಸಂಬಳದ ನೌಕರನಾಗಿದ್ದಲ್ಲಿ ನಷ್ಟ ಪರಿಹಾರದ ಮೊತ್ತವನ್ನು ನಿರ್ಧರಿಸುವುದಕ್ಕೆ ಅವಲಂಬಿತವಾಗಿರುತ್ತವೆ. ಹಾಗೆಯೇ ಮರಣಾಂತಿಕ ಅಪಘಾತದಲ್ಲಿ ಮೃತ ಹೊಂದಿನ ವ್ಯಕ್ತಿಯ ವಿಧವೆ ಪತ್ನಿ ಮತ್ತು ಅಪ್ರಾಪ್ತ ಮಕ್ಕಳ ಸಂಬಂಧದಲ್ಲಿ ಸಾಂಪ್ರದಾಯಿಕ ಶೀರ್ಷಿಕೆಗಳಡಿಯಲ್ಲಿ ನಷ್ಟ ಪರಿಹಾರವನ್ನು ಹೆಚ್ಚಿಸುವುದಕ್ಕೆ, ಸರ್ವೋಚ್ಚ ನ್ಯಾಯಾಲಯವು, ***ಆರತಿ ಭೇಜ್ ಬುರಹ –ವಿರುದ್ಧ– ಪ್ರದಾನ ಉಪ ನಿರ್ದೇಶಕರು, ಭಾರತದ ಭೌಗೋಳಿಕ ಸರ್ವೇ***[4] ಮತ್ತು ***ಪ್ರಧಾನ ವ್ಯವಸ್ಥಾಪಕರು ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮ ವಿರುದ್ಧ ಸುಷ್ಮಾ ಥಾಮಸ್***[5]**,** ಈ ಮೊಕದ್ದಮೆಗಳಲ್ಲಿ ನೀಡಿದ ತೀರ್ಪನ್ನು ಅವಲಂಬಿಸಬಹುದಾಗಿದೆ.

14. ಈ ಅಪೀಲಿನಲ್ಲಿ, ಮೃತನ ಪತ್ನಿಗೆ ಆಗಿರುವ ಸಾಂಗತ್ಯ ನಷ್ಟದ ಸಂಬಂಧದಲ್ಲಿ ಪತ್ನಿಗೆ ಸಹಚರ್ಯೆ, ರಕ್ಷಣೆ, ಸಹಾಯ, ಸೌಕರ್ಯ, ಮಾರ್ಗದರ್ಶನ, ಸಾಂಘಿಕತೆ, ಸಾಂತ್ವನ, ವಾತ್ಸಲ್ಯ ಮತ್ತು ಲೈಂಗಿಕತೆಯ ಹಕ್ಕನ್ನು ಒಳಗೊಂಡಿರುವ ಸಾಂಗತ್ಯದ ನಷ್ಟವನ್ನು ವಿವರಿಸಲಾಗಿದೆ. ಈ ಅಪೀಲಿನಲ್ಲಿ ಮೊದಲು ಕ್ಲೇಮುದಾರರು ಮೃತನ ಪತ್ನಿಯಾಗಿರುವರು ಮತ್ತು ಎರಡು ಮತ್ತು ಮೂರನೇ ಕ್ಲೇಮುದಾರರು ಮೃತನ ಅಪ್ರಾಪ್ತ ವಯಸ್ಸಿನ ಮಕ್ಕಳಾಗಿರುವರು. ಅಪೀಲಿನಲ್ಲಿ ವಿವಿಧ ಕಾರಣಗಳನ್ನು ನೀಡುವ ಮೂಲಕ ನಷ್ಟ ಪರಿಹಾರವನ್ನು ಹೆಚ್ಚಿಸುವುದಕ್ಕೆ ಪ್ರಾರ್ಥಿಸಿರುವರು.

---

2. 2012 ಎಸಿಜೆ 1428 (ಎಸ್‌ಸಿ) 3. 2009 ಎಸಿಜೆ 1298 (ಎಸ್‌ಸಿ)
4. 2003 ಎಸಿಜೆ 680 (ಎಸ್‌ಸಿ) 5. 1994 ಎಸಿಜೆ 1(ಎಸ್‌ಸಿ)

ಆದುದರಿಂದ, ಸಾಂಗತ್ಯ ನಷ್ಟವಾಗಿ ನ್ಯಾಯಾಧಿಕರಣವು ತೀರ್ಮಾನಿಸಿದ 10,000/–ಕ್ಕೆ ವಿರುದ್ಧವಾಗಿ 1,00,000/– ಗಳನ್ನು ನಿಗದಿಪಡಿಸುವುದು ನ್ಯಾಯಯುತವಾದುದಾಗಿದೆ ಮತ್ತು ಯುಕ್ತವಾದುದಾಗಿದೆ. ಅಂದರೆ ಸಾಂಗತ್ಯ ನಷ್ಟದ ಪರಿಹಾರವಾಗಿ ರೂ.90,000/– ಗಳನ್ನು ಹೆಚ್ಚಿಸಲಾಗಿದೆ. ಮುಂದುವರೆದು, ಪ್ರೀತಿ ಮತ್ತು ವಾತ್ಸಲ್ಯ ನಷ್ಟಕ್ಕೆ ತೀರ್ಮಾನಿಸಿದ 5,000/– ರೂ.ಗಳ ವಿರುದ್ಧ 1,00,000/– ರೂ.ಗಳಷ್ಟು ಹೆಚ್ಚಿಸಲು ತೀರ್ಮಾನಿಸಿರುವುದು ಸಮರ್ಪಕವಾಗಿದೆ ಎಂದು ನಾನು ಭಾವಿಸುತ್ತೇನೆ. ಅದರ ಪರಿಣಾಮ ಪ್ರೀತಿ ಮತ್ತು ವಾತ್ಸಲ್ಯ ನಷ್ಟಕ್ಕೆ 95,000/– ರೂ.ಗಳಷ್ಟು ಮೊಬಲಗನ್ನು ಹೆಚ್ಚಿಸಲಾಗಿದೆ. ನ್ಯಾಯಾಧಿಕರಣ 'ಮೃತದೇಹವನ್ನು ಸಾಗಿಸುವ' ವೆಚ್ಚವಾಗಿ 2,000/– ರೂ.ಗಳನ್ನು ನೀಡಲು ತೀರ್ಮಾನಿಸಿದೆ. ನಾನು ಅದನ್ನು ಮತ್ತಷ್ಟು ಮೊಬಲಗು ಅದರ 2,000/– ರೂ.ನ ಜೊತೆಯಲ್ಲಿ 3,000/–ರೂ.ಗಳನ್ನು ಹೆಚ್ಚಿಸಿರುವೆ. ಅಂದರೆ ಸದರಿ ಶೀರ್ಷಿಕೆಯ ಅಡಿಯಲ್ಲಿ ಸಾಗಣೆ ವೆಚ್ಚವಾಗಿ 5,000/–ರೂ.ಗಳನ್ನು ನಿರ್ಣಯಿಸಲಾಗಿದೆ. ಮುಂದುವರೆದು ಅಂತ್ಯಸಂಸ್ಕಾರ ಮತ್ತು ವಿಧಿ ವಿಧಾನಗಳ ವೆಚ್ಚವಾಗಿ ನೀಡಲಾದ 5,000/– ರೂ.ಗಳಿಗೆ ವಿರುದ್ಧವಾಗಿ 15,000/– ರೂ.ಗಳನ್ನು ಹೆಚ್ಚಿಸಲಾಗಿದೆ. ಸದರಿ ಶೀರ್ಷಿಕೆಯ ಅಡಿಯಲ್ಲಿ ಒಟ್ಟು ಮೊತ್ತವು 20,000/–ರೂ.ಗಳಾಗಿವೆ. ಅಂದರೆ ಎಂಎಫ್ಎ 21386/2011ರಲ್ಲಿನ ಕ್ಲೇಮುದಾರರು/ಅಪೀಲುದಾರರು ನ್ಯಾಯಾಧಿಕರಣವು ತೀರ್ಮಾನಿಸಿದ 9,82,000/– ರೂ.ಗಳಿಗೆ ಪ್ರತಿಯಾಗಿ ಒಟ್ಟು 14,85,000/– ರೂ.ಗಳಷ್ಟು (ಹದಿನಾಲ್ಕು ಲಕ್ಷ ಎಂಬತ್ತೈದು ಸಾವಿರ ಮಾತ್ರ) ನಷ್ಟ ಪರಿಹಾರವನ್ನು ಪಡೆಯಲು ಕ್ಲೇಮುದಾರರು ಹಕ್ಕುಳ್ಳವರಾಗಿರುವರು.

15. ಅಪರಾಧಕ್ಕೆ ಗುರಿಯಾದ ವಾಹನದ ವಿಮಾಕರ್ತರು ದಾಖಲಿಸಿದ (ಎಂಎಫ್ಎ ಸಂಖ್ಯೆ 21592/2011) ಅಪೀಲಿನಲ್ಲಿ ಮೇಲೆ ಮಾಡಿದ ಚರ್ಚೆಯ ದೃಷ್ಟಿಯಲ್ಲಿ ಇಡೀ ವಸ್ತು ವಿಷಯವನ್ನು ಮರು ವಿವೇಚನೆ ಮಾಡಲಾಗಿದ್ದು, ಅದರಂತೆ ವಿಮಾಕರ್ತನು ಮಾಡಿದ ಅಪೀಲಿನಲ್ಲಿ ಗುಣಾರ್ಹತೆಗಳು ಇಲ್ಲದಿರುವುದರಿಂದ ಅದನ್ನು ವಜಾಗೊಳಿಸಲಾಗಿದೆ. ಮೇಲೆ ಹೇಳಿದ ಕಾರಣಗಳಿಗಾಗಿ ಕ್ಲೇಮುದಾರರು ದಾಖಲಿಸಿದ (ಎಂಎಫ್ಎ 21386/2011) ಅಪೀಲನ್ನು ಪುರಸ್ಕರಿಸಲಾಗಿದೆ.

ತದನುಸಾರವಾಗಿ ವಿಮಾಕರ್ತರು ದಾಖಲಿಸಿದ ಎಂಎಫ್ಎ ಸಂಖ್ಯೆ: 21592/2011ನ್ನು ವಜಾಗೊಳಿಸಲಾಗಿದೆ. ಕ್ಲೇಮುದಾರರು ದಾಖಲಿಸಿದ ಎಂಎಫ್ಎ ಸಂಖ್ಯೆ: 21386/2011 ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ. ಹೆಚ್ಚುವರಿ ಎಂಎಸಿಟಿ ಯಲ್ಲಾಪುರ, ಎಂವಿಸಿ ಸಂಖ್ಯೆ: 85/2008ರ ಮೂಲಕ ದಿನಾಂಕ 24.09.2010ರಂದು ಹೊರಡಿಸಿದ ಪ್ರಶ್ನಿತ ತೀರ್ಪನ್ನು ಮತ್ತು ನಷ್ಟ ಪರಿಹಾರದ ಮೊತ್ತವನ್ನು ಮಾರ್ಪಾಡಿಸಲಾಗಿದೆ. ಅದರಂತೆ ಕ್ಲೇಮುದಾರರಿಗೆ 9,82,000/– ರೂ.ಗಳಿಂದ 14,85,000/– ರೂ.ಗಳಿಗೆ (ಹದಿನಾಲ್ಕು ಲಕ್ಷ ಎಂಬತ್ತೈದು ಸಾವಿರ) ನಷ್ಟ ಪರಿಹಾರವನ್ನು ಹೆಚ್ಚಿಸಲಾಗಿದೆ. ಈ ಮೊತ್ತವನ್ನು ಕ್ಲೇಮುದಾರರಿಗೆ ಸಂದಾಯ ಮಾಡುವುದು ಅಂದರೆ ಹೆಚ್ಚಿಸಿದ ನಷ್ಟ ಪರಿಹಾರದ ಮೊತ್ತವು 5,03,000/– ರೂ.ಗಳಾಗಿರುತ್ತದೆ. ಹಾಗಾಗಿ ಈ ಸಂಬಂಧದಲ್ಲಿ ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ನಷ್ಟ ಪರಿಹಾರದ ಮೊತ್ತದ ಬಡ್ಡಿ ದರ, ಠೇವಣಿ ಮತ್ತು ಹಂಚಿಕೆಗೆ ಸಂಬಂಧಪಟ್ಟಂತೆ ಆದಷ್ಟು ಮಟ್ಟಿಗೆ ಅದನ್ನು ಹಂಚಿಕೆ ಮಾಡದೆ ಉಳಿದಿರತಕ್ಕದ್ದು. ತದನುಸಾರವಾಗಿ ಡಿಕ್ರಿಯ ಹಣವನ್ನು ಪಡೆದುಕೊಳ್ಳಲು ಸೂಚಿಸಿದೆ. ಹೆಚ್ಚಿಸಿದ ನಷ್ಟ ಪರಿಹಾರವಾದ ಒಟ್ಟು ಮೊಬಲಗನ್ನು 5,03,000/– ರೂ.ಗಳನ್ನು ಈ ತೀರ್ಪಿನ ಪ್ರತಿ ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗಾಗಿ ಠೇವಣಿ ಇಡತಕ್ಕದ್ದು.

ಯಾವುದೇ ಮೊತ್ತವು ಠೇವಣಿಯಲ್ಲಿ ಇದ್ದ ಪಕ್ಷದಲ್ಲಿ, ಸಂಬಂಧಪಟ್ಟ ನ್ಯಾಯಾಧಿಕರಣವು ತತ್‌ಕ್ಷಣವೇ ಅದನ್ನು ವರ್ಗಾಯಿಸತಕ್ಕದ್ದು.

ವೆಚ್ಚಗಳಿಗೆ ಯಾವುದೇ ಆದೇಶವಿರುವುದಿಲ್ಲ.

---